ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ವೃತ್ತಿ/ಕೆಲಸ ನಿಷೇಧ ಮತ್ತು ಪುನರ್ವಸತಿ ಕಾಯ್ದೆ 2013 ರ ರಾಜ್ಯ ಮೇಲ್ವಿಚಾರಣಾ ಸಮಿತಿಯ ಸಭೆಯನ್ನು ಮಾನ್ಯ ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖಾ ಸಚಿವರು ಹಾಗೂ ಅಧ್ಯಕ್ಷರು ರಾಜ್ಯ ಮೇಲ್ವಿಚಾರಣಾ ಸಮಿತಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 27-08-2020 ರಂದು ನಡೆದ ಸಭೆಯ ನಡವಳಿ.

**ಸಭೆಯಲ್ಲಿ ಹಾಜರಾಗಿದ್ದ ಸದಸ್ಯರು**

1. **ಶ್ರೀ. ಗೋವಿಂದ ಎಂ. ಕಾರಜೋಳ** — ಅಧ್ಯಕ್ಷರು
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖಾ ಸಚಿವರು.

2. **ಶ್ರೀ ಜಗದೀಶ ಹಿರೇಮನಿ,** — ಸದಸ್ಯರು
ಸದಸ್ಯರು. ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ.

3. **ಶ್ರೀ. ಬಸವರಾಜ ದಡೆಸೂಗೂರ,** — ಸದಸ್ಯರು
ಮಾನ್ಯ ಶಾಸಕರು, ಕನಕಗಿರಿ ವಿಧಾನಸಭಾ ಕ್ಷೇತ್ರ.

4. **ಶ್ರೀಮತಿ.ಉಮಾ ಮಹದೇವನ್** ಭಾ.ಆ.ಸೇ, — ಸದಸ್ಯರು
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಇಲಾಖೆ, ಗ್ರಾ&ಪಂ.ರಾ ಇಲಾಖೆ, ಬೆಂಗಳೂರು.

5. **ಶ್ರೀಮತಿ. ಗೀತಾ ರಾಜು ವಾಡೇಕರ್,** — ಸದಸ್ಯರು
ನಾಮನಿರ್ದೇಶಿತ ಸದಸ್ಯರು

6. **ಶ್ರೀಮತಿ. ಬೇಬಿ ಲಂಕೆಪ್ಪ ಮೇತ್ರಿ,** — ಸದಸ್ಯರು
ನಾಮನಿರ್ದೇಶಿತ ಸದಸ್ಯರು

7. **ಶ್ರೀ. ಎಂ. ವಿ. ವೆಂಕಟೇಶ,** — ಸದಸ್ಯರು
ನಾಮನಿರ್ದೇಶಿತ ಸದಸ್ಯರು

8. **ಶ್ರೀ. ನಾಗರಾಜ ಬಿನ್ ಶಿವಶಂಕರ್,** — ಸದಸ್ಯರು
ನಾಮನಿರ್ದೇಶಿತ ಸದಸ್ಯರು

9. **ಸಂಚಾಲಕರು,** — ಸದಸ್ಯರು
ರಾಜ್ಯಮಟ್ಟದ ಬ್ಯಾಂಕುಗಳ ಸಮಿತಿ



Scanned with CamScanner

## **ವಿಶೇಷ ಆಹ್ವಾನಿತರು / ಸದಸ್ಯರ ಪರವಾಗಿ ಹಾಜರಾದ ಅಧಿಕಾರಿಗಳು**

1. **ಡಾ|| ಇ. ವೆಂಕಟಯ್ಯ,**
   ಸಲಹೆಗಾರರರು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. **ಡಾ|| ಎನ್. ಜಯರಾಮ್,** ಭಾ.ಆ.ಸೇ.
   ಅಧ್ಯಕ್ಷರು,ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
3. **ಶ್ರೀಮತಿ. ಬಿ. ಬಿ. ಕಾವೇರಿ,** ಭಾ.ಆ.ಸೇ.
   ನಿರ್ದೇಶಕರು, ಪೌರಾಡಳಿತ ಇಲಾಖೆ, ಬೆಂಗಳೂರು.
4. **ಡಾ|| ರವಿಕುಮಾರ್ ಸುರಪುರ,** ಭಾ.ಆ.ಸೇ.
   ಆಯುಕ್ತರು,ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
5. **ಶ್ರೀಮತಿ ಪ್ರಿಯಾಂಕ್ ಮೇರಿ ಫ್ರಾನ್ಸಿಸ್,** ಭಾ.ಆ.ಸೇ, ಆಯುಕ್ತರು,ಪಂಚಾಯತ್‌ರಾಜ್, ಬೆಂಗಳೂರು.
6. **ಶ್ರೀಮತಿ ಆರ್. ರಮಾ, ಕಾರ್ಯದರ್ಶಿಗಳು, ರವರು** ಅಧ್ಯಕ್ಷರು,
   ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಬೆಂಗಳೂರು ರವರ ಪರವಾಗಿ
7. **ಶ್ರೀ ಶಿವರಾಮ್ ಕಾರ್ಯದರ್ಶಿಗಳು,** ರವರು ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ರವರ ಪರವಾಗಿ
8. **ಶ್ರೀಮತಿ. ಎಲಿಷ ಆಂಡ್ರೂಸ್,** ಸರ್ಕಾರದ ಉಪ ಕಾರ್ಯದರ್ಶಿ-1, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,** ನಗರಾಭಿವೃದ್ಧಿ ಇಲಾಖೆ ಇವರ ಪರವಾಗಿ
9. **ಶ್ರೀ ಪುಟ್ಟನಂಜಯ್ಯ,** ಉಪ ಕಾರ್ಯದರ್ಶಿ,
   ಸಮಾಜ ಕಲ್ಯಾಣ ಇಲಾಖೆ, **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,** ಸಮಾಜ ಕಲ್ಯಾಣ ಇಲಾಖೆ ಇವರ ಪರವಾಗಿ
10. **ಶ್ರೀಮತಿ ಎಂ.ಇ.ಮಹಾಲಕ್ಷ್ಮಿ,** ಉಪ ಕಾರ್ಯದರ್ಶಿ, ಸಿ&ಐ, ವಾ&ಕೈ.ಇ.
    **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,** ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಪರವಾಗಿ
11. **ಡಾ||ಕೆ.ವಿ.ಜಗದೀಶ,** ಭಾ.ಪೊ.ಸೇ,
    ಸಹಾಯಕ ಆರಕ್ಷಕ ಮಹಾನಿರೀಕ್ಷಕರು, ಅಪರಾಧ ಇವರ ಪರವಾಗಿ
12. **ಶ್ರೀ ಸುದರ್ಶನ್ ಕುಮಾರ್,** ಉಪ ಕಾರ್ಯದರ್ಶಿ (ಕಲ್ಯಾಣ) ಆರ್ಥಿಕ ಇಲಾಖೆ, ಬೆಂಗಳೂರು **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,** ಆರ್ಥಿಕ ಇಲಾಖೆ ಇವರ ಪರವಾಗಿ
13. **ಶ್ರೀ.ಸರ್ಫರಾಜ್ ಖಾನ್,** ಜಂಟಿ ಆಯುಕ್ತರು,
    ಘನ ತ್ಯಾಜ್ಯ ನಿರ್ವಹಣೆ, ಬೃ.ಬೆ.ಮ.ಪಾ, ಬೆಂಗಳೂರು
    **ಆಯುಕ್ತರು,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪರವಾಗಿ



Scanned with CamScanner

14. **ಶ್ರೀ ಜೆರೋಮ್ ರಾಜ್ ಸಬ್ ಏರಿಯಾ ಕಮಾಂಡರ್,**
ಕರ್ನಾಟಕ ಮತ್ತು ಕೇರಳ ಸಬ್ ಏರಿಯಾ ಇವರ ಪರವಾಗಿ

15. **ಶ್ರೀ ಸೇತುರಾಮ್,** ಎಡಿಆರ್‌ಎಂ **ಡಿವಿಜನಲ್ ಜನರಲ್ ಮ್ಯಾನೇಜರ್,**
ಡಿವಿಜನಲ್ ಸೆಂಟ್ರಲ್ ಆಫೀಸ್, ಸೌತ್ ವೆಸ್ಟರ್ನ್ ರೈಲ್ವೆ ಇವರ ಪರವಾಗಿ.

ಕಾರ್ಯದರ್ಶಿ, ಸಫಾಯಿ ಕರ್ಮಚಾರಿಗಳ ಆಯೋಗ ಇವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿ, ವಿಷಯ ಪ್ರಸ್ತಾಪಿಸಿದರು.

1. **ದಿನಾಂಕ:20.06.2017ರಂದು ನಡೆದ 2ನೇ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ.**

ದಿನಾಂಕ: 20.06.2017ರಂದು ನಡೆದ 2ನೇ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯ ನಡವಳಿಗಳ ಮೇಲೆ ವಿವಿಧ ಇಲಾಖೆಗಳು ಕೈಗೊಂಡಿರುವ ಕ್ರಮಗಳ ಅನುಪಾಲನಾ ವರದಿಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖಾ ಸಚಿವರು ಅನುಮೋದಿಸಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುತ್ತಾರೆ.

- ನೈರ್ಮಲ್ಯ ಶೌಚಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅಸ್ತಿತ್ವದಲ್ಲಿರುವ ಸಿಂಗಲ್ ಫಿಟ್‌ಗಳನ್ನು ಡಬಲ್ ಫಿಟ್‌ಗಳನ್ನಾಗಿ ಶೀಘ್ರವಾಗಿ ಪರಿವರ್ತಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನಿರ್ದೇಶಿಸಿದರು.
- ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಕೊಳಚೆ ನಿರ್ಮೂಲನಾ ಮಂಡಳಿ ರವರು ಹೊಸದಾಗಿ ನಿರ್ಮಿಸುವ ವಸತಿಗಳನ್ನು ಅನುಮೋದಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಶೌಚಾಲಯವನ್ನು ನಕ್ಷೆ ಮತ್ತು ಅಂದಾಜು ಪಟ್ಟಿಯಲ್ಲಿ ಸೇರ್ಪಡಿಸಲು ನಿರ್ದೇಶಿಸಿದರು.
- ಸ್ವಚ್ಛಭಾರತ್ ಅಭಿಯಾನ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುಟುಂಬಗಳಿಗೆ ಶೌಚಾಲಯಗಳ ನಿರ್ಮಾಣಕ್ಕಾಗಿ ಕೇಂದ್ರ ಮತ್ತು ರಾಜ್ಯಸರ್ಕಾರದ ಅನುದಾನವನ್ನು ಬಿಡುಗಡೆಗೊಳಿಸುವುದು. ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನಿರ್ದೇಶನ ನೀಡಲು ತೀರ್ಮಾನಿಸಲಾಯಿತು.
- ಸಂಬಂಧಪಟ್ಟ ಇಲಾಖೆಗಳು, ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಎಂ.ಎಸ್ ಕಾಯ್ದೆ 2013ರನ್ವಯ 15 ದಿನಗಳ ಕಾಲಾವಕಾಶದೊಳಗೆ ಅನೈರ್ಮಲ್ಯ ಶೌಚಾಲಯಗಳನ್ನು ಕಡ್ಡಾಯವಾಗಿ ನೈರ್ಮಲ್ಯ ಶೌಚಾಲಯಗಳನ್ನಾಗಿ ಅಥವಾ ಸಮುದಾಯ ಶೌಚಾಲಯಗಳನ್ನಾಗಿ ಪರಿವರ್ತಿಸಲು ಸುತ್ತೋಲೆ ಹೊರಡಿಸಲು ತೀರ್ಮಾನಿಸಲಾಯಿತು.
- ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನೈರ್ಮಲ್ಯ ಶೌಚಾಲಯಗಳನ್ನಾಗಿ ಪರಿವರ್ತಿಸಿರುವ ಬಗ್ಗೆ ದೃಢೀಕರಿಸಿ, ದೃಢೀಕರಣ ಪತ್ರ ನೀಡುವಂತೆ



Scanned with CamScanner

ತಿಳಿಸಲಾಯಿತು.ದೃಢೀಕರಣದ ನಂತರವೂ ಅನೈರ್ಮಲ್ಯ ಶೌಚಾಲಯಗಳು ಕಂಡುಬಂದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿ ನಮೂದಿಸುವಂತೆ ತೀರ್ಮಾನಿಸಲಾಯಿತು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಮಾಲಿನ್ಯ ನಿಯಂತ್ರಣ ಮಂಡಳಿಯವರ ಸಹಯೋಗದೊಂದಿಗೆಖಾಸಗಿ ಆಪಾರ್ಟ್‌ಮೆಂಟ್‌ಗಳು, ಮಾಲ್‌ಗಳು, ವಿಲ್ಲಾಗಳ ಸಂಖ್ಯೆಗಳು ಮತ್ತು ಅವುಗಳ ನಿರ್ವಹಣೆಯ ವಿಧಾನದ ವಿವರವನ್ನು 15 ದಿನಗಳೊಳಗಾಗಿ ನೀಡುವಂತೆ ತೀರ್ಮಾನಿಸಲಾಯಿತು.

  (**ಕ್ರಮ**:- **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ನಗರಾಭಿವೃದ್ಧಿ ಇಲಾಖೆ,**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

2. **ಎಂ.ಎಸ್ ಕಾಯ್ದೆ 2013ರ ಪ್ರಕಾರ ಹಾಗೂ ರಾಷ್ಟ್ರೀಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ನವದೆಹಲಿರವರ ನಿರ್ದೇಶನದಂತೆ ಬೆಂಗಳೂರು ನಗರ ಜಿಲ್ಲೆ(ಬಿಬಿಎಂಪಿ ವ್ಯಾಪ್ತಿ), ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಲಬುರಗಿ, ಧಾರವಾಡ, ಕೋಲಾರ, ಮೈಸೂರು, ಬಾಗಲಕೋಟೆ, ಬೆಳಗಾವಿ, ರಾಯಚೂರು, ಹಾವೇರಿ ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿಶೇಷ ಸಮೀಕ್ಷೆಯನ್ನು ಪೂರ್ಣಗೊಳಿಸದೇ ಇರುವ ಬಗ್ಗೆ.**

**ಚರ್ಚೆ**:-ಸಭೆಯಲ್ಲಿ ಹಾಜರಿದ್ದ ಪೌರಾಡಳಿತ ನಿರ್ದೇಶಕರು,ಕಲಬುರಗಿ, ದಾವಣಗೆರೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಸಮೀಕ್ಷೆಯು ಸಂಪೂರ್ಣಗೊಂಡಿದ್ದು ವರದಿಯಾಗಿರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಭಾಗಶಃ ಸಮೀಕ್ಷೆಯಾಗಿರುತ್ತದೆ.ಬೆಳಗಾವಿ, ರಾಯಚೂರು, ಹಾವೇರಿ, ಬಾಗಲಕೋಟೆ, ಮೈಸೂರು, ಕೋಲಾರ, ಬೆಂಗಳೂರು (ನ), ಬೆಂಗಳೂರು (ಗ್ರಾ) ಜಿಲ್ಲೆಗಳಲ್ಲಿ ವಿಜಿಯಲೆನ್ಸ್ ಸಮಿತಿಯ ಸಭೆಯು ನಡೆಯದ ಕಾರಣ ಹಾಗೂ ಸಮೀಕ್ಷೆಯಲ್ಲಿ ಗೊಂದಲಗಳು ಇರುವ ಕಾರಣ ಸಮೀಕ್ಷೆ ಬಾಕಿ ಇರುವುದಾಗಿ ತಿಳಿಸಿರುತ್ತಾರೆ.

ಸಲಹೆಗಾರರರು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ, ಸಮಾಜ ಕಲ್ಯಾಣ ಇಲಾಖೆರವರು ಸಮೀಕ್ಷೆಯಾಗಿಲ್ಲದ ಜಿಲ್ಲೆಗಳ ಯೋಜನಾ ನಿರ್ದೇಶಕರು ಮತ್ತು ಮಹಾನಗರ ಪಾಲಿಕೆ ಆಯುಕ್ತರೊಂದಿಗೆ 15 ದಿನಗಳೊಳಗೆ ಸಭೆಯನ್ನು ನಡೆಸಿ ಸಮೀಕ್ಷೆ ಪೂರ್ಣಗೊಳಿಸಲು ತಿಳಿಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ**:-

1. ಕಾಯ್ದೆ ಬಂದು 8 ವರ್ಷಗಳು ಕಳೆದರೂಸಮೀಕ್ಷೆಯು ಪೂರ್ಣಗೊಳ್ಳದೇ ವಿಳಂಬವಾಗಿರುವುದರಿಂದ ವಿಷಾಧವನ್ನು ವ್ಯಕ್ತಪಡಿಸುತ್ತಾ, ಅಕ್ಟೋಬರ್-2020 ಮಾಹೆಯೊಳಗೆ ಪೂರ್ಣಗೊಳ್ಳದೇ ಇದ್ದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೇಲೆ



Scanned with CamScanner

ಎಂ.ಎಸ್.ಕಾಯ್ದೆ 2013 ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಲು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ನಿರ್ದೇಶನ ನೀಡಿದರು.

2. ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ವಿಶೇಷ ಸಮೀಕ್ಷೆಗೆ ಸಂಬಂಧಿಸಿದಂತೆ ಪೂರ್ಣಗೊಳ್ಳದೆ ಇರುವುದರಿಂದ ಹಾಗೂ ಸಮೀಕ್ಷೆಯಲ್ಲಿ ಗೊಂದಲವಿರುವುದರಿಂದ, ಈ ಪ್ರಯುಕ್ತ ಬೆಳಗಾವಿ ಮಹಾನಗರ ಪಾಲಿಕೆ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಸಭೆಯನ್ನು ಏರ್ಪಡಿಸುವಂತೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರಿಗೆ ನಿರ್ದೇಶಿಸಿದರು.

(**ಕ್ರಮ**:- **ನಿರ್ದೇಶಕರು**, ಪೌರಾಡಳಿತ ನಿರ್ದೇಶನಾಲಯ. **ಆಯುಕ್ತರು**,ಸಮಾಜ ಕಲ್ಯಾಣ ಇಲಾಖೆ)

3. <u>ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಲಾಗಿರುವ ಸಿಂಗಲ್ ಪಿಟ್‌ಗಳನ್ನು ಸ್ವಚ್ಛಗೊಳಿಸಲು ಕೈಗೊಂಡಿರುವ ವಿಧಾನಹಾಗೂ ವ್ಯಾಪಕ ಪ್ರಚಾರ ಮಾಡಲು ತೆಗೆದುಕೊಂಡ ಕ್ರಮಗಳ ಕುರಿತು.</u>

<u>**ಚರ್ಚೆ**</u>:-ಸಭೆಯಲ್ಲಿ ಹಾಜರಿದ್ದ ಸರ್ಕಾರದ ಪ್ರಧಾನ ಕಾರ್ಯದರ್ಶಿ,ಪಂಚಾಯತ್ ರಾಜ್‌ರವರು ಸಿಂಗಲ್ ಪಿಟ್‌ಗಳನ್ನು ಡಬಲ್ ಪಿಟ್‌ಗಳಾಗಿ ಪರಿವರ್ತಿಸಲಾಗುತ್ತಿದೆ. ವೈಯಕ್ತಿಕ ಶೌಚಾಲಯಗಳ ನಿರ್ಮಾಣಗಳನ್ನು ಪೂರ್ಣಗೊಳಿಸಲಾಗಿದೆ.ಶೌಚ ಗುಂಡಿಗಳು ತುಂಬಿದ ಕೂಡಲೇ ವಿಲೇವಾರಿ ಮಾಡಲು ಪ್ರತಿ ತಾಲ್ಲೂಕಿಗೆ ಒಂದು ಸಕ್ಕಿಂಗ್ ಮಷಿನ್ ವ್ಯವಸ್ಥೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.ಒಂದು ಶೌಚಗುಂಡಿಯ ಜೊತೆಗೆ ಮತ್ತೊಂದು ಶೌಚಗುಂಡಿ ನಿರ್ಮಾಣ ಮಾಡಿ ಅವಳಿ ಗುಂಡಿ (Twin Pit) ಮಾದರಿಯಲ್ಲಿ ಮಾರ್ಪಾಡು ಮಾಡುವಂತೆ ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಶೌಚಾಲಯದ ಪಿಟ್ಟುಗಳ ನಿರ್ವಹಣೆಯ ಬಗ್ಗೆ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**ಪೌರಾಡಳಿತ** ನಿರ್ದೇಶನಾಲಯದ ನಿರ್ದೇಶಕರು ನಗರ ಪ್ರದೇಶಗಳಲ್ಲಿರುವ ಪಿಟ್ಟುಗುಂಡಿಗಳನ್ನು ಸ್ವಚ್ಛಗೊಳಿಸಲು ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಿ ಬಳಸಿಕೊಳ್ಳಲು ಅಧಿಕಾರವನ್ನು ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರು, ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ ರವರು ರಾಜ್ಯದಲ್ಲಿ ಪ್ರವಾಸ ಕೈಗೊಂಡ ಸಮಯದಲ್ಲಿ ಗ್ರಾಮೀಣ ಭಾಗಗಳಲ್ಲಿ ವ್ಯವಸ್ಥಿತವಾಗಿ ಶೌಚಾಲಯಗಳ ನಿರ್ವಹಣೆಯಾಗುತ್ತಿರುವುದಿಲ್ಲ. ಜಿಲ್ಲೆಗಳಲ್ಲಿರುವ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಹಾಗೂ ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳು ಇರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ



Scanned with CamScanner

ಪಿಟ್‌ಗುಂಡಿಗಳನ್ನು ಆಧುನಿಕವಾಗಿ ರಾಸಾಯನಿಕ ಪೌಡರ್‌ನ್ನು ಬಳಸಿ ಸ್ವಚ್ಛಗೊಳಸಬಹುದಾಗಿರುತ್ತದೆ ಎಂದು ಸಭೆಗೆ ತಿಳಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ:-**

1. ತಾಲ್ಲೂಕು ಹಾಗೂ ಗ್ರಾಮೀಣ ಮಟ್ಟದಲ್ಲಿ ಸಕ್ಕಿಂಗ್, ಜಟ್ಟಿಂಗ್ ಮತ್ತು ಡಿಸಿಲ್ಟಿಂಗ್ ಯಂತ್ರಗಳನ್ನು ಕಡ್ಡಾಯವಾಗಿ ಖರೀದಿ ಮಾಡಿ ಉಪಯೋಗಿಸುವುದು. ಈ ರೀತಿ ಖರೀದಿಸಿದ ವಾಹನಗಳ ನಿರ್ವಹಣೆಯನ್ನು ಗ್ರಾಮೀಣ ಭಾಗದಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಗೆ ನೀಡುವ ಮೂಲಕ ಅವರಿಗೆ ಪರ್ಯಾಯ ಉದ್ಯೋಗವನ್ನು ಕಲ್ಪಿಸುವಂತೆ ತಿಳಸಿದರು.

2. ಗ್ರಾಮೀಣ ಭಾಗದಲ್ಲಿ ನಿರ್ಮಿಸಲಾಗಿರುವ ಸಿಂಗಲ್ ಫಿಟ್‌ಗಳನ್ನು ಆಧುನಿಕ ರಾಸಾಯನಿಕ ಪೌಡರ್‌ನ್ನು ಬಳಸಿ ಸ್ವಚ್ಛಗೊಳಸಿದ ನಂತರ ಬರುವ ನೀರನ್ನು ಕೃಷಿಯೇತರ ಚಟುವಟಿಕೆಗಳಗೆ ಬಳಸಿಕೊಂಡು ಸಾಲಿಡ್‌ನ್ನು ಡಿಸಿಲ್ಟಿಂಗ್ ಯಂತ್ರದ ಮೂಲಕ ಸ್ವಚ್ಛಗೊಳಸಲು ಆಯ್ದ ಕೆಲವು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅಳವಡಿಸಿಕೊಂಡು ನಂತರ ಎಲ್ಲಾ ಜಿಲ್ಲೆಗಳಗೂ ವಿಸ್ತರಿಸಲು ಕ್ರಮವಹಿಸುವುದು.

(**ಕ್ರಮ:- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

4. **ಎಂ.ಎಸ್ ಕಾಯ್ದೆ 2013ರ ಸೆಕ್ಷನ್ 13 & 16ರ ಪ್ರಕಾರ ಗುರುತಿಸಲ್ಪಟ್ಟ 3210 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಗೆ ಪುನರ್ವಸತಿ ಕಲ್ಪಿಸಿರುವ ಬಗ್ಗೆ ಮಾಹಿತಿ**

**ಚರ್ಚೆ:**

1. **ಕುಟುಂಬದ ಅವಲಂಬಿತರನ್ನೊಳಗೊಂಡಂತೆ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ನೀಡಿರುವ ಬಗ್ಗೆ.**

- **ಪೌರಾಡಳತ ನಿರ್ದೇಶನಾಲಯ:** ಗುರುತಿನ ಚೀಟಿ ನೀಡಲು ಪತ್ರದ ಸಂಖ್ಯೆ: ಪೌನಿ: 103: ಘವನಿ: 2012-14, ದಿನಾಂಕ: 03.07.2014 ಎಲ್ಲಾ ಜಿಲ್ಲಾಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ ಎಂದು ಸಭೆಗೆ ವಿವರಿಸಿದರು.

- **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:** ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಗುರುತಿಸಲಾಗಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಗೆ ಗುರುತಿನ ಚೀಟಿಗಳನ್ನು ನೀಡಲಾಗಿದೆ. ಉಳದ ಜಿಲ್ಲೆಗಳಲ್ಲಿ ಗುರುತಿನ ಚೀಟಿ ವಿತರಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.



Scanned with CamScanner

**2. ಒಂದುಬಾರಿ ನಗದು ಸಹಾಯಧನ ವಿತರಿಸಿರುವ ಬಗ್ಗೆ.**

- 1616 ಫಲಾನುಭವಿಗಳಿಗೆ ಎನ್.ಎಸ್.ಕೆ.ಎಫ್.ಡಿ.ಸಿ ವತಿಯಿಂದ ಒಂದುಬಾರಿ ನಗದು ಸಹಾಯಧನ ವಿತರಿಸಲಾಗಿದೆ. ಉಳಿದ ಅರ್ಜಿಗಳಲ್ಲಿ ಕೆಲ ಅರ್ಜಿಗಳು ಒಂದೇ ಕುಟುಂಬದವರಾಗಿರುವುದರಿಂದ NSKFDCಯಿಂದ ತಿರಸ್ಕೃತಗೊಂಡಿರುತ್ತವೆ.ಕೆಲವು ಜಿಲ್ಲೆಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಂದ NSKFDCಗೆ ಮಾಹಿತಿ ನೀಡದೇ ಇರುವುದರಿಂದ ವಿಳಂಬವಾಗಿರುತ್ತದೆ ಎಂದು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸಭೆಗೆ ವಿವರಿಸಿರುತ್ತಾರೆ.
- **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:** 24 ಜಿಲ್ಲೆಗಳಲ್ಲಿ ಗುರುತಿಸಲ್ಪಟ್ಟ 1,080 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಒಂದುಬಾರಿ ನಗದು ಸಹಾಯಧನ ಪಾವತಿಸಲಾಗಿದೆ. 117 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಒಂದುಬಾರಿ ನಗದು ಸಹಾಯಧನ ಪಾವತಿಗಾಗಿ ಕಳುಹಿಸಲಾಗಿದೆ.

**3. ಕುಟುಂಬದ ಅವಲಂಬಿತರ ಮಕ್ಕಳಿಗೆ ರಾಜ್ಯ ಅಥವಾ ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಬಗ್ಗೆ.**

- **ಸಮಾಜ ಕಲ್ಯಾಣ ಇಲಾಖೆ:-**

  2018-19ನೇ ಸಾಲಿಗೆ 1,287 ವಿದ್ಯಾರ್ಥಿಗಳಿಗೆ ಮತ್ತು 2019-20ನೇ ಸಾಲಿಗೆ 430 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಾವತಿಸಲು ಬಾಕಿ ಉಳಿದಿದ್ದು ಕೂಡಲೇ ಪಾವತಿಸಲು ಕ್ರಮವಹಿಸುವಂತೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರಿಗೆ ಸೂಚಿಸಲಾಯಿತು.

- **ಸಮಾಜ ಕಲ್ಯಾಣ ಇಲಾಖೆ (ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ)**

  2020-21 ನೇ ಸಾಲಿನಲ್ಲಿಯೂ ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ ರವರ 282 ಮಕ್ಕಳು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ನಡೆಸಲಾಗುತ್ತಿರುವ ವಸತಿ ಶಾಲೆಗಳಲ್ಲಿ ಪ್ರವೇಶ ಪರೀಕ್ಷೆ ಇಲ್ಲದೆ ನೇರವಾಗಿ ಪ್ರವೇಶ ಹೊಂದಲು ಅರಿವು ಮೂಡಿಸಿ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳು ದಾಖಲಾಗುವಂತೆ ಕ್ರಮವಹಿಸಲು ಸೂಚಿಸಲಾಯಿತು.

- **ಪೌರಾಡಳಿತ ಇಲಾಖೆ:-**

  ಪೌರಕಾರ್ಮಿಕರು/ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಟುಂಬದ ಮಕ್ಕಳಿಗೆ



Scanned with CamScanner

ವಿದ್ಯಾರ್ಥಿ ವೇತನ ಮಂಜೂರು ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರುಗಳಿಗೆ ಸೂಚನೆ ನೀಡಲಾಗಿರುತ್ತದೆ ಎಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ತಿಳಿಸಿದರು.

**4. ಕುಟುಂಬದ ಅವಲಂಬಿತರು ವಾಸಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಫ್ಲಾಟ್ ಅಥವಾ ಮನೆಯನ್ನು ನಿರ್ಮಾಣ/ ಹಣಕಾಸು ನೆರವು ಕಲ್ಪಿಸಿರುವ ಬಗ್ಗೆ.**

- ಪೌರಾಡಳಿತ ನಿರ್ದೇಶನಾಲಯದಿಂದ ಮನೆ ಕಟ್ಟಲು ನಿವೇಶನ ಹಂಚಿಕೆ ಮಾಡಲು ಪತ್ರದ ಸಂಖ್ಯೆ: ಪೌನಿ: 103: ಫವನಿ: 2012-14, ದಿನಾಂಕ:03.07.2014 ಎಲ್ಲಾ ಜಿಲ್ಲಾಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿರುತ್ತದೆ.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ವಸತಿಯನ್ನು ಕಲ್ಪಿಸಲು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ಪ್ರಥಮ ಆದ್ಯತೆಯ ಮೇರೆಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಪತ್ರ ಬರೆಯಲಾಗಿದ್ದು, ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**5. ಕುಟುಂಬದ ಒಬ್ಬ ವಯಸ್ಕ ಸದಸ್ಯನಿಗೆ ಕೌಶಲ್ಯ ತರಬೇತಿ ನೀಡಿರುವ ಬಗ್ಗೆ.**

- 2020-21ನೇ ಸಾಲಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಕ್ರಮವಹಿಸಲಾಗುತ್ತಿದೆ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸಭೆಗೆ ವಿವರಿಸಿದರು.

**6. ಕುಟುಂಬದ ಒಬ್ಬ ವಯಸ್ಕ ಸದಸ್ಯನಿಗೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯೋಜನೆಗಳಡಿ ಪರ್ಯಾಯ ಉದ್ಯೋಗವನ್ನು ಕಲ್ಪಿಸಲು ಸಹಾಯಧನ ಮತ್ತು ರಿಯಾಯಿತಿ ಸಾಲ ನೀಡಿರುವ ಬಗ್ಗೆ.**

- 2020-21ನೇ ಸಾಲಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಸ್ವಯಂ ಉದ್ಯೋಗ ಯೋಜನೆಯಡಿ-5200, ಭೂಒಡೆತನದಡಿ-65, ಮೈಕ್ರೋ ಯೋಜನೆಯಡಿ-2000, ಐರಾವತ ಯೋಜನೆಯಡಿ-400 ಅರ್ಜಿಗಳು ಸ್ವೀಕೃತವಾಗಿರುತ್ತವೆ ಹಾಗೂ ಅರ್ಜಿಗಳ ಪರಿಶೀಲನೆಯು ಪ್ರಗತಿ ಹಂತದಲ್ಲಿರುತ್ತದೆ ಎಂದು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸಭೆಗೆ ತಿಳಿಸಿದರು.

**<u>ಮಾನ್ಯ ಸಭಾಧ್ಯಕ್ಷರ ತೀರ್ಮಾನ:-</u>**

1. ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮೀಣ ಭಾಗದಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕುಟುಂಬದ ಸದಸ್ಯರನ್ನೊಳಗೊಂಡ ಗುರುತಿನ ಚೀಟಿಯನ್ನು ನೀಡಲು ಕ್ರಮವಹಿಸಲು ವಿಳಂಬವಾದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು/ಮುಖ್ಯ



Scanned with CamScanner

ಕಾರ್ಯನಿರ್ವಹಣಾಧಿಕಾರಿಗಳ ಮೇಲೆ ಎಂ.ಎಸ್. ಕಾಯ್ದೆ 2013 ರಡಿಯಲ್ಲಿ ಪ್ರಕರಣವನ್ನು ದಾಖಲಿಸಲು ಕ್ರಮವಹಿಸುವುದು.

2. ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗುರುತಿಸಲಾಗಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅರ್ಜಿಗಳನ್ನು NSKFDCಗೆ ಅಪ್‌ಲೋಡ್ ಮಾಡಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕ್ರಮವಹಿಸುವುದು. ಈ ಕುರಿತಾಗಿ ಪೌರಾಡಳಿತ ನಿರ್ದೇಶನಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸೂಕ್ತ ಸುತ್ತೋಲೆಯನ್ನು ಹೊರಡಿಸುವುದು.

3. ನಗರ ಪ್ರದೇಶದಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಡ್ಡಾಯವಾಗಿ ವಸತಿಯನ್ನು ಕಲ್ಪಿಸಿಕೊಡಲು ಪೌರಕಾರ್ಮಿಕರ ಗೃಹಭಾಗ್ಯ ಅಥವಾ ರಾಜೀವ್‌ಗಾಂಧಿ ವಸತಿ ನಿಗಮ ಯೋಜನೆಯ ಮೂಲಕ ವಸತಿಯನ್ನು ಕಲ್ಪಿಸಿಕೊಡಲು ಪೌರಾಡಳಿತ ಇಲಾಖೆಯು ಸೂಕ್ತ ಕ್ರಮವಹಿಸುವುದು.

4. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಟುಂಬದ ಅವಲಂಬಿತರಿಗೆ ಗ್ರಾಮೀಣ ಭಾಗದಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ಪ್ರಥಮ ಆದ್ಯತೆಯ ಮೇರೆಗೆ ವಸತಿಯನ್ನು ಕಲ್ಪಿಸಲು ಕ್ರಮವಹಿಸುವುದು.

5. ಬಿ.ಬಿ.ಎಂ.ಪಿಯಲ್ಲಿ ಘನತ್ಯಾಜ್ಯ ನಿರ್ವಹಣಾ ವಿಭಾಗದಲ್ಲಿ ಖರೀದಿಸಲಾಗಿರುವ ಟಿಪ್ಪರ್ ಆಟೋಗಳನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ನಿರ್ವಹಣೆಗಾಗಿ ನೀಡುವ ಮೂಲಕ ಪರ್ಯಾಯ ಉದ್ಯೋಗವನ್ನು ಕಲ್ಪಿಸಲು ಹಾಗೂ ವಲಯವಾರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಹೊಸದಾಗಿ ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಸಾಲ ಸೌಲಭ್ಯಗಳನ್ನು ಒದಗಿಸಲು ವಿವಿಧ ಯೋಜನೆಗಳನ್ನು ರೂಪಿಸಿಕೊಳ್ಳಲು ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.

6. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಂದ ಸ್ವೀಕೃತವಾಗಿರುವ ಅರ್ಜಿಗಳನ್ನು ಶೀಘ್ರವಾಗಿ ಪರಿಶೀಲಿಸಿ ಪುನರ್ವಸತಿಯನ್ನು ಕಲ್ಪಿಸಿಕೊಡಲು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಹಾಗೂ ಸಂಬಂಧಪಟ್ಟ ಇಲಾಖೆಗಳು ಅಗತ್ಯ ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.

7. ವಿದ್ಯಾರ್ಥಿ ವೇತನ ಪ್ರಯೋಜನ ಪಡೆದ ವಿದ್ಯಾರ್ಥಿಗಳ ತರಗತಿವಾರು ಮಾಹಿತಿಯನ್ನು ವರ್ಷವಾರು ಸಂಗ್ರಹಿಸಿ ಕ್ರೂಡೀಕೃತ ಮಾಹಿತಿಯನ್ನು ಒದಗಿಸುವಂತೆ ತಿಳಿಸಲಾಯಿತು.



Scanned with CamScanner

(**ಕ್ರಮ**:- **ವ್ಯವಸ್ಥಾಪಕ ನಿರ್ದೇಶಕರು,** ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,** ನಗರಾಭಿವೃದ್ಧಿ ಇಲಾಖೆ, **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ **ನಿರ್ದೇಶಕರು,** ಪೌರಾಡಳಿತ ನಿರ್ದೇಶನಾಲಯ, **ಆಯುಕ್ತರು,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, **ಆಯುಕ್ತರು,** ಸಮಾಜ ಕಲ್ಯಾಣ ಇಲಾಖೆ)

5. **ಮ್ಯಾನ್‌ಹೋಲ್‌ನಲ್ಲಿ ಮೃತಪಡಲು ಕಾರಣರಾಗಿರುವವರ ಮೇಲೆ ಎಂ.ಎಸ್ ಕಾಯ್ದೆ 2013, ಐಪಿಸಿ 304, ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ 1989 ಮತ್ತು ಪ್ರಕರಣ ದಾಖಲಿಸಿ ಕಾನೂನು ರೀತಿ ಶಿಕ್ಷೆ ನೀಡಿರುವ ಬಗ್ಗೆ. ಸ್ಕ್ಯಾವೆಂಜಿಂಗ್ ಕಾರ್ಯ ನಡೆಯುತ್ತಿರುವ ಕುರಿತು ಸಾರ್ವಜನಿಕರು ಅಥವಾ ಸಂಘಟನೆಗಳು ದೂರು ಸಲ್ಲಿಸಿದ್ದಲ್ಲಿ ಪ್ರಕರಣವನ್ನು ದಾಖಲಿಸದೇ ಇರುವ ಬಗ್ಗೆ.**

**ಚರ್ಚೆ**:-ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಮೃತ ಪ್ರಕರಣಗಳು ನಡೆದ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಾಗ ಎಂ.ಎಸ್ ಕಾಯ್ದೆಯ 2013ರ ಬಗ್ಗೆ ಹಾಗೂ ಮೃತಪಟ್ಟ ವ್ಯಕ್ತಿಯು ಪ.ಜಾತಿ/ಪ.ಪಂಗಡಕ್ಕೆ ಸೇರಿದವರಾಗಿದ್ದಲ್ಲಿ ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ 1989ರಡಿ ಪ್ರಕರಣ ದಾಖಲಿಸಲು ಹೆಚ್ಚಿನ ಅರಿವಿಲ್ಲದ ಕಾರಣ ಕಾಯ್ದೆಯನ್ನು ಕೈಬಿಟ್ಟು ಪ್ರಕರಣ ದಾಖಲಿಸಿರುವ ಅಂಶಗಳು ಕಂಡುಬಂದಿರುತ್ತದೆ.

ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯ ನಡೆಯುತ್ತಿರುವ ಕುರಿತು ಸಾರ್ವಜನಿಕರು ಅಥವಾ ಸಂಘಟನೆಗಳು ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದಲ್ಲಿ ಠಾಣೆಗಳಲ್ಲಿ ಎಂ.ಎಸ್ ಕಾಯ್ದೆ 2013ರಡಿ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳದೇ ಇರುವುದು ಕಂಡುಬಂದಿರುತ್ತದೆ.

ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ದಿನಾಂಕ:19.02.2018ರಲ್ಲಿ ಎಂ.ಎಸ್ ಕಾಯ್ದೆಯ ಬಗ್ಗೆ ವಿವರಿಸಿ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಲು ಸುತ್ತೋಲೆಯನ್ನು ಹೊರಡಿಸಲಾಗಿದೆ.ಈ ಕಾಯ್ದೆಯ ಬಗ್ಗೆ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯ ನಡೆಯುತ್ತಿರುವ ಕುರಿತು ಸಾರ್ವಜನಿಕರು ಅಥವಾ ಸಂಘಟನೆಗಳು ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದಲ್ಲಿ ಠಾಣೆಗಳಲ್ಲಿ ಎಂ.ಎಸ್ ಕಾಯ್ದೆ 2013ರಡಿ ಹಾಗೂ ವ್ಯಕ್ತಿಯು ಪ.ಜಾತಿ/ಪ.ಪಂಗಡಕ್ಕೆ ಸೇರಿದವರಾಗಿದ್ದಲ್ಲಿ ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ 1989ರಡಿ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ:-**

1. ಈಗಾಗಲೇ ಸುತ್ತೋಲೆ ಹೊರಡಿಸಿದ್ದರೂ ಸಹ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಎಂ.ಎಸ್ ಕಾಯ್ದೆ 2013 ಮತ್ತು ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ 1989ರ



Scanned with CamScanner

ಅರಿವು ಇಲ್ಲದಿರುವುದರ ಹಿನ್ನೆಲೆಯಲ್ಲಿ ಎಲ್ಲಾ ಪೋಲೀಸ್ ಠಾಣೆಗಳ ಅಧಿಕಾರಿ/ ಸಿಬ್ಬಂಧಿಗಳಿಗೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಅಧಿಕಾರಿ/ ಸಿಬ್ಬಂದಿಗಳಿಗೆ ಕಾರ್ಯಗಾರವನ್ನು ನಡೆಸುವುದರ ಮೂಲಕ ಅರಿವು ಮೂಡಿಸಲು ಹಾಗೂ ಈ ರೀತಿಯ ಘಟನೆಗಳು ಮರುಕಳಸದಂತೆ ಕ್ರಮವಹಿಸುವುದು.

2. ಮ್ಯಾನ್‌ಹೋಲ್, ಸೆಪ್ಟಿಕ್‌ಟ್ಯಾಂಕ್ ಒಳಗೆ ಸ್ಕ್ಯಾವೆಂಜರ್‌ಗಳನ್ನು ಇಳಿಸಿ ಕಾರ್ಯನಿರ್ವಹಿಸುತ್ತಿರುವ ಕುರಿತು ಸಂಘಟನೆಗಳು, ಸಂಘ ಸಂಸ್ಥೆಗಳು ಹಾಗೂ ಇತರೆ ಯಾರೇ ದೂರು ನೀಡಿದರೆ ಎಫ್.ಐ.ಆರ್ ನ್ನು ದಾಖಲಿಸಲು ಅಗತ್ಯ ಕ್ರಮವಹಿಸುವುದು ಹಾಗೂ 2019-20 ಮತ್ತು 2020-21ನೇ ಸಾಲಿನ ಈ ರೀತಿಯ ದೂರುಗಳಲ್ಲಿ ಎಫ್.ಐ.ಆರ್ ದಾಖಲಾಗದಿರುವ ಪ್ರಕರಣಗಳಲ್ಲಿ ಎಫ್.ಐ.ಆರ್‌ನ್ನು ದಾಖಲಿಸಲು ಸುತ್ತೋಲೆಯನ್ನು ಅಧೀನ ಕಛೇರಿಗಳಿಗೆ ರವಾನಿಸುವಂತೆ ತೀರ್ಮಾನಿಸಲಾಯಿತು.

**(<u>ಕ್ರಮ</u>:- ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ, ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಅಪರಾಧ ವಿಭಾಗ)**

6. **<u>ಸೆಕ್ಷನ್ 24ರನ್ವಯ ಜಿಲ್ಲಾ ಹಾಗೂ ಉಪ ವಿಭಾಗ ಮಟ್ಟದಲ್ಲಿ ಕಾಲಕಾಲಕ್ಕೆ ಜಿಲ್ಲಾ ಜಾಗೃತಿ ಸಮಿತಿಯ ಸಭೆಯನ್ನು ನಡೆಸಿ ನಡವಳಿಗಳನ್ನು ಕಳುಹಿಸುವ ಬಗ್ಗೆ.</u>**

**<u>ಚರ್ಚೆ</u>**:-ಎಂ.ಎಸ್ ಕಾಯ್ದೆ 2013ರ ಸೆಕ್ಷನ್ 24ರನ್ವಯ ರಚಿಸಿದ ಜಿಲ್ಲಾ ಹಾಗೂ ಉಪ ವಿಭಾಗ ಮಟ್ಟದ ಜಾಗೃತಿ ಸಮಿತಿಯ ಸಭೆಗಳು ಕಾಯ್ದೆಯ ಪ್ರಕಾರ 3 ತಿಂಗಳಿಗೊಮ್ಮೆ ನಡೆಸಿ ಅವರ ಸಮಸ್ಯೆಗಳಿಗೆ ಪರಿಹಾರ ನೀಡಬೇಕಾಗಿರುತ್ತದೆ. ಆದರೆ ಈ ರೀತಿಯ ಸಭೆಗಳು ಪ್ರತ್ಯೇಕವಾಗಿ ನಡೆಯುತ್ತಿರುವುದಿಲ್ಲ.

ಜಿಲ್ಲೆಗಳಲ್ಲಿ ನಡೆಸುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿಶೇಷ ಸಮೀಕ್ಷೆಗಳ ವರದಿಯನ್ನು ಸದರಿ ಕಮಿಟಿಯಲ್ಲಿ ಅನುಮೋದನೆಗೊಳಿಸಿ NSKFDC ಅಂತರ್ಜಾಲದಲ್ಲಿ ಸೆಪ್ಟೆಂಬರ್ 2019ರೊಳಗೆ ಅಳವಡಿಸಬೇಕಾಗಿರುತ್ತದೆ. ಆದರೆ ಈ ಪ್ರಕ್ರಿಯೆಯು ಪೂರ್ಣಗೊಂಡಿರುವುದಿಲ್ಲ. ದಿನಾಂಕ:21.08.2020 ರಂದು ನಡೆದ ನೀತಿ ಆಯೋಗದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಈ ವಿಶೇಷ ಸಮೀಕ್ಷೆಯನ್ನು ಪೂರ್ಣಗೊಳಿಸಿ ಅಂತರ್ಜಾಲದಲ್ಲಿ ದಿನಾಂಕ:02.10.2020 ರೊಳಗೆ ಅಳವಡಿಸುವಂತೆ ನಿರ್ದೇಶನವಿರುತ್ತದೆ ಎಂದು ಸದಸ್ಯ ಕಾರ್ಯದರ್ಶಿಗಳು ಸಭೆಗೆ ಪ್ರಸ್ತಾಪಿಸಿರುತ್ತಾರೆ.

ಕೋವಿಡ್-19 ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಮತ್ತು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಹಾಗೂ ಉಪ ವಿಭಾಗ ಮಟ್ಟದ ಸಭೆಗಳನ್ನು ನಡೆಸಲಾಗುತ್ತಿರುವುದಿಲ್ಲ. ಈ ಕೂಡಲೇ ಸಭೆಗಳನ್ನು ನಿಗಧಿತ ಅವಧಿಯಲ್ಲಿ ನಡೆಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದು ಎಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಸಭೆಗೆ ವಿವರಿಸಿದರು.



Scanned with CamScanner

**<u>ಮಾನ್ಯ ಸಭಾಧ್ಯಕ್ಷರ ತೀರ್ಮಾನ:-</u>** ಎಂ.ಎಸ್ ಕಾಯ್ದೆ 2013ರ ಸೆಕ್ಷನ್ 24ರನ್ವಯ ಜಿಲ್ಲಾ ಹಾಗೂ ಉಪ ವಿಭಾಗ ಮಟ್ಟದಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಪ್ರತ್ಯೇಕವಾಗಿ ಜಿಲ್ಲಾ ಜಾಗೃತಿ ಸಮಿತಿಯ ಸಭೆಯನ್ನು ನಡೆಸಿ ಸಭೆಯ ನಡವಳಿಗಳನ್ನು ಕಳುಹಿಸಿಕೊಡಲು ಸೂಕ್ತ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.

**(<u>ಕ್ರಮ</u>:- ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)**

7. **<u>ಬೆಂಗಳೂರು ಮಹಾನಗರ ಪಾಲಿಕೆ ಮತ್ತು ನಗರದ ಇತರೆ ಸ್ಥಳಗಳ ಖಾಸಗಿ ಎಸ್.ಟಿ.ಪಿ ಪ್ಲಾಂಟ್‌ಗಳನ್ನು ಸ್ವಚ್ಛಗೊಳಿಸಲು ಹೋಗಿ ಮೃತಪಡುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಸದರಿ ಎಸ್.ಟಿ.ಪಿ ಪ್ಲಾಂಟ್‌ಗಳ ಮುಂದೆ "ಅಪಾಯಕಾರಿ" ಎಂದು ನಾಮಫಲಕಗಳನ್ನು ಅಳವಡಿಸುವುದು.</u>**

**<u>ಚರ್ಚೆ</u>:-**ಬೆಂಗಳೂರು ನಗರ ವ್ಯಾಪ್ತಿ ಹಾಗೂ ಇತರೆ ನಗರ ಪ್ರದೇಶಗಳಲ್ಲಿ ಎಸ್.ಟಿ.ಪಿ ಪ್ಲಾಂಟ್‌ಗಳನ್ನು ಯಾವುದೇ ಸುರಕ್ಷತಾ ಕ್ರಮಗಳನ್ನು ವಹಿಸದೆ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಮೃತಪಡುವವರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಸ್.ಟಿ.ಪಿ ಪ್ಲಾಂಟ್‌ಗಳ ಮುಂದೆ 'ಅಪಾಯಕಾರಿ' ನಾಮಫಲಕಗಳನ್ನು ಅಳವಡಿಸುವಂತೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಎಸ್.ಟಿ.ಪಿ ಪ್ಲಾಂಟ್‌ಗಳ ಮುಂದೆ 'ಅಪಾಯಕಾರಿ' ನಾಮಫಲಕಗಳನ್ನು ಅಳವಡಿಸಲು ಪ್ರತ್ಯೇಕವಾಗಿ ನಿಯಮಾವಳಿಗಳನ್ನು ರೂಪಿಸಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಬಿಬಿಎಂಪಿ ಅಧಿಕಾರಿಯವರು ತಿಳಿಸಿದರು.

ಮಾಲಿನ್ಯ ನಿಯಂತ್ರಣ ಮಂಡಳಿಯವರು ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಮುಂದೆ "ಅಪಾಯಕಾರಿ" ನಾಮಫಲಕ ಅಳವಡಿಸುವುದು ಮತ್ತು ಅದರ ಕಾರ್ಯಚಟುವಟಿಕೆ ವೇಳೆ ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಷರತ್ತುಗಳನ್ನು ವಿಧಿಸಿರುವ ಬಗ್ಗೆ ಸಭೆಗೆ ಮಾಹಿತಿ ನೀಡಿರುತ್ತಾರೆ.

**<u>ಮಾನ್ಯ ಸಭಾಧ್ಯಕ್ಷರ ತೀರ್ಮಾನ:-</u>** ಬಿಬಿಎಂಪಿ ಮತ್ತು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರು ಜೊತೆಗೂಡಿ ನಗರದಲ್ಲಿರುವ ಎಲ್ಲಾ ಎಸ್.ಟಿ.ಪಿ ಪ್ಲಾಂಟ್‌ಗಳ ಮುಂದೆ ಹಾಗೂ ಇತರ ಸ್ಥಳಗಳಲ್ಲಿ ಸಂಬಂಧಪಟ್ಟ ಇಲಾಖೆಗಳು "ಅಪಾಯಕಾರಿ" ಫಲಕಗಳಲ್ಲಿ ಅಳವಡಿಸಿರುವ ನಿಯಮ ಹಾಗೂ ಸೂಚನೆಗಳ ಜೊತೆಗೆ ಅಪಾಯಕಾರಿ ಚಿಹ್ನೆಯನ್ನು ನಮೂದಿಸಿ ಕಾರ್ಯಚಟುವಟಿಕೆ ವೇಳೆ ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಷರತ್ತುಗಳನ್ನು ವಿಧಿಸಿ ಫಲಕವನ್ನು ಅಳವಡಿಸುವಂತೆ ತೀರ್ಮಾನಿಸಲಾಯಿತು.



Scanned with CamScanner

(ಕ್ರಮ:- **ಆಯುಕ್ತರು**, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, **ಸದಸ್ಯ ಕಾರ್ಯದರ್ಶಿ**,ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, **ಅಧ್ಯಕ್ಷರು** ಬಿಡಬ್ಲ್ಯೂಎಸ್ಎಸ್‌ಬಿ, **ನಿರ್ದೇಶಕರು** ಪೌರಾಡಳಿತ ನಿರ್ದೇಶನಾಲಯ)

೮. **ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಹೊಂದಿರುವ ಖಾಸಗಿಯವರು ಸ್ವಚ್ಛತಾಸೇವೆಗೆ ಹೆಚ್ಚಿನ ದರವನ್ನು ವಿಧಿಸುತ್ತಿದ್ದು, ಬಿಡ್ಯೂಎಸ್ಎಸ್‌ಬಿ ಹಾಗೂ ನಗರಾಭಿವೃದ್ಧಿ ಇಲಾಖೆಯವರು ಖಾಸಗಿ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಿ ಅವರು ನೀಡುವ ಸೇವೆಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ**

**ಚರ್ಚೆ:-** ಖಾಸಗಿಯವರು ಸ್ವಚ್ಛತಾ ಸೇವೆಗೆ ನೀಡುತ್ತಿರುವ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳಿಗೆ ಏಕರೂಪತೆ ಇರುವುದಿಲ್ಲವಾದ ಕಾರಣ ಹೆಚ್ಚಿನ ದರವನ್ನು ವಿಧಿಸುತ್ತಿರುತ್ತಾರೆ. ಇದರಿಂದಾಗಿ ಮ್ಯಾನ್‌ಹೋಲ್/ಸೆಪ್ಟಿಕ್‌ಟ್ಯಾಂಕ್/ಗಟಾರಗಳನ್ನು ಸ್ವಚ್ಛಗೊಳಿಸಲು ಸಾರ್ವಜನಿಕರು ಇತರೆ ತರಬೇತಿ ಪಡೆಯದ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕೆಲಸ ನಿರ್ವಹಿಸುವ ಬಗ್ಗೆ ಅರಿವು ಮತ್ತು ಅನುಭವ ಇಲ್ಲದ ಕಾರ್ಮಿಕರಿಂದ ಸ್ವಚ್ಛಗೊಳಿಸಲು ನಿಯೋಜಿಸಿಕೊಳ್ಳುತ್ತಿರುವ ಮೂಲಕ ಎಂ.ಎಸ್ ಕಾಯ್ದೆಯು ಉಲ್ಲಂಘನೆಯಾಗಿರುತ್ತದೆ ಮತ್ತು ಮ್ಯಾನ್‌ಹೋಲ್‌ನಲ್ಲಿ ಮೃತಪಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಆದುದರಿಂದ ಸರ್ಕಾರವು ಖಾಸಗಿ ಸಂಸ್ಥೆಗಳ ಸಕ್ಕಿಂಗ್/ಜಟ್ಟಿಂಗ್ ಯಂತ್ರಗಳನ್ನು ಹೊಂದಿರುವ ಮಾಲೀಕರ ಪಟ್ಟಿಯನ್ನು ತಯಾರಿಸಿ ಅವರು ನೀಡುವ ಸೇವೆಗೆ ಅನುಗುಣವಾಗಿ ದರವನ್ನು ನಿಗಧಿಪಡಿಸಬೇಕಾಗಿರುತ್ತದೆ ಎಂದು ಪ್ರಸ್ತಾಪವಾಗಿರುತ್ತದೆ.

ಈ ಕುರಿತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಕ್ಕಿಂಗ್/ಜಟ್ಟಿಂಗ್ ಯಂತ್ರ ಹೊಂದಿರುವ ಮಾಲೀಕರ ಹೆಸರುಗಳನ್ನು ಪಟ್ಟಿ ಮಾಡಲು ಅಗತ್ಯ ಕ್ರಮವಹಿಸಲಾಗುತ್ತದೆ ಎಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ತಿಳಿಸಿರುತ್ತಾರೆ.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸೆಪ್ಟಿಕ್ ಟ್ಯಾಂಕ್/ ಸೋಕ್ ಪಿಟ್ ಗಳ ಸ್ವಚ್ಚತಾ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಸಂಸ್ಥೆಗಳ ಹೆಸರು, ವಿಧಿಸುತ್ತಿರುವ ಶುಲ್ಕ ಹಾಗೂ ಇತರೆ ವಿವರಗಳನ್ನು ಪಡೆಯಲಾಗುತ್ತಿದೆ. ವಿವರಗಳನ್ನು ಪಡೆದು ಹೈದರಾಬಾದ್ ಮಾದರಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅವಲಂಭಿತರಿಗೆ ವಹಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಚರ್ಚಿಸಿ ಕ್ರಮವಹಿಸಲಾಗುವುದು ಎಂದು ಪೌರಾಡಳಿತ ನಿರ್ದೇಶಕರು ತಿಳಿಸಿರುತ್ತಾರೆ.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ:-** ನಗರಾಭಿವೃದ್ಧಿ ಇಲಾಖೆಯಿಂದ ಸಂಬಂಧಪಟ್ಟ ಇಲಾಖೆಯವರೊಂದಿಗೆ ಚರ್ಚಿಸಿ ಖಾಸಗಿ ಸಂಸ್ಥೆಗಳ, ಸಂಸ್ಥೆಗಳಲ್ಲಿರುವ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳ ಪಟ್ಟಿಯನ್ನು ತಯಾರಿಸಿ ಅವರು ನೀಡುವ ಸ್ವಚ್ಛತಾ ಸೇವೆಗೆ ಅನುಗುಣವಾಗಿ ನಿರ್ದಿಷ್ಟ ಶುಲ್ಕವನ್ನು ನಿಗಧಿಪಡಿಸುವ ಸಂಬಂಧ ಸೂಕ್ತ ಸುತ್ತೋಲೆಯನ್ನು ಹೊರಡಿಸಲು ತೀರ್ಮಾನಿಸಲಾಯಿತು.



Scanned with CamScanner

(**ಕ್ರಮ**:- **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ನಗರಾಭಿವೃದ್ಧಿ ಇಲಾಖೆ, **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, **ನಿರ್ದೇಶಕರು**, ಪೌರಾಡಳಿತ ನಿರ್ದೇಶನಾಲಯ, **ಅಧ್ಯಕ್ಷರು**, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, **ಆಯುಕ್ತರು**, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)

**9. ಬಿ.ಡಬ್ಲ್ಯೂ.ಎಸ್.ಎಸ್.ಬಿ ಮುಖಾಂತರ ತರಬೇತಿ ಹೊಂದಿ ಸರ್ಟಿಫಿಕೇಟ್ ಪಡೆದಿರುವಂತಹ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಒದಗಿಸುವ ಬಗ್ಗೆ.**

**ಚರ್ಚೆ**:- ಬಿ.ಡಬ್ಲ್ಯೂ.ಎಸ್.ಎಸ್.ಬಿ ಮುಖಾಂತರ ತರಬೇತಿ ಹೊಂದಿ ಸರ್ಟಿಫಿಕೇಟ್ ಪಡೆದಿರುವಂತಹ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಒದಗಿಸಲು ಪ್ರಸ್ತುತ ಸರ್ಟಿಫಿಕೇಟ್ ಹೊಂದಿರುವ ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವ ಕೆಲಸದ ವಿವರವನ್ನು ಪಡೆಯುವಂತೆ ನೋಡಲ್ ಅಧಿಕಾರಿ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿರವರು ತಿಳಿಸಿದರು.

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರು ಹುಬ್ಬಳ್ಳಿಯಲ್ಲಿ 70 ಕಾರ್ಮಿಕರಿಗೆ "Pay & Use" ಶೌಚಾಲಯಗಳ ನಿರ್ವಹಣೆಯನ್ನು ನೀಡಲಾಗಿರುತ್ತದೆ. ಅದೇ ಮಾದರಿಯಲ್ಲಿ ಸರ್ಟಿಫಿಕೇಟ್ ಹೊಂದಿರುವಂತಹ ಕಾರ್ಮಿಕರಿಗೆ ನೀಡಿದಲ್ಲಿ ಅವರಿಗೆ ಬಂಡವಾಳವಿಲ್ಲದೆ ಉದ್ಯೋಗಾವಕಾಶವನ್ನು ಕಲ್ಪಿಸಿದಂತಾಗುತ್ತದೆ ಎಂದು ಸಭೆಗೆ ತಿಳಿಸಿದರು.

ರಾಜ್ಯ ಮೇಲ್ವಿಚಾರಣಾ ಸಮಿತಿಯ ಸದಸ್ಯರಾದ ಶ್ರೀ ವೆಂಕಟೇಶ್ ರವರು, ಸರ್ಟಿಫಿಕೇಟ್ ಹೊಂದಿರುವಂತಹ ಕಾರ್ಮಿಕರಿಗೆ ರೈಲ್ವೆ ಮತ್ತು ಪ್ರವಾಸಿ ತಾಣಗಳಲ್ಲಿ "Pay & Use" ಶೌಚಾಲಯಗಳ ನಿರ್ವಹಣೆಯನ್ನು ನೀಡಬಹುದಾಗಿರುತ್ತದೆ ಎಂದು ತಿಳಿಸಿದರು.

**ನೋಡಲ್ ಅಧಿಕಾರಿ**, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿರವರು ಸಭೆಯಲ್ಲಿ ಹಾಜರಿದ್ದ ರೈಲ್ವೆ ಇಲಾಖೆಯ ಅಧಿಕಾರಿಯವರನ್ನು ರೈಲ್ವೆ ನಿಲ್ದಾಣಗಳಲ್ಲಿ ಶೌಚಾಲಯಗಳ ನಿರ್ವಹಣೆಯ ಬಗ್ಗೆ ಅನುಸರಿಸುತ್ತಿರುವ ವಿಧಾನದ ಮಾಹಿತಿಯನ್ನು ವಿವರಿಸುವಂತೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಾದ್ದ ರೈಲ್ವೆ ಇಲಾಖೆಯ ಅಧಿಕಾರಿಗಳು ಶೌಚಾಲಯಗಳ ಸ್ವಚ್ಛತೆಗಾಗಿ ಟೆಂಡರ್‌ನ್ನು ಆಹ್ವಾನಿಸಿ ಅರ್ಹ ಟೆಂಡರ್‌ದಾರ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾಗಾರರಿಗೆ ವೇತನವನ್ನು ಪಾವತಿಸಲಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ನೋಡಲ್ ಅಧಿಕಾರಿ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ.ರವರು ಶೌಚಾಲಯಗಳ ಸ್ವಚ್ಛತಾ ನಿರ್ವಹಣೆಯಲ್ಲಿ ಶೇ.20ರಷ್ಟು ಎಂ.ಎಸ್.ಎಂ ಪ್ರಕ್ಯೂರ್‌ಮೆಂಟ್ ಮತ್ತು ಶೇ.4ರಷ್ಟು ಎಸ್.ಸಿ.ಎ ರಡಿ ಮೀಸಲಾತಿಯನ್ನು ಕೆಪಿಟಿಪಿ ಆಕ್ಟ್‌ರಡಿಯಲ್ಲಿ ಕಲ್ಪಿಸುವಂತೆ ತಿಳಿಸಿದರು. ಈ ಕುರಿತು ರೈಲ್ವೆ ಅಧಿಕಾರಿಗಳು ಪ್ರಸ್ತಾವನೆಯನ್ನು ಬೋರ್ಡ್‌ನಲ್ಲಿ ಮಂಡಿಸುವುದಾಗಿ ತಿಳಿಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ**:-



Scanned with CamScanner

1. "Pay & Use" ಶೌಚಾಲಯಗಳ ನಿರ್ವಹಣೆಯನ್ನು ಸರ್ಟಿಫಿಕೇಟ್ ಹೊಂದಿರುವಂತಹ ಕಾರ್ಮಿಕರಿಗೆ ವಹಿಸಿಕೊಡುವುದು.
2. ರೈಲ್ವೆ ಇಲಾಖೆಯಲ್ಲಿ ಶೌಚಾಲಯಗಳ ನಿರ್ವಹಣೆ ಕುರಿತು ಮೀಸಲಾತಿ ಕಲ್ಪಿಸುವ ಸಂಬಂಧ ಸೂಕ್ತ ಪ್ರಸ್ತಾವನೆಯನ್ನು ಬೋರ್ಡ್‌ನಲ್ಲಿ ಮಂಡಿಸುವುದು.
3. ರೈಲ್ವೆ ಇಲಾಖೆಯಲ್ಲಿ ಶೌಚಾಲಯಗಳ ನಿರ್ವಹಣೆ ಕುರಿತು ಮೀಸಲಾತಿ ಕಲ್ಪಿಸುವ ಸಂಬಂಧ ಸೂಕ್ತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಕಳುಹಿಸಿಕೊಡುವುದು ಎಂದು ತೀರ್ಮಾನಿಸಲಾಯಿತು.

(<u>ಕ್ರಮ</u>:- **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ನಗರಾಭಿವೃದ್ಧಿ ಇಲಾಖೆ, **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, **ನಿರ್ದೇಶಕರು**, ಪೌರಾಡಳಿತ ನಿರ್ದೇಶನಾಲಯ, **ಆಯುಕ್ತರು**, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, **ಆಯುಕ್ತರು**, ಸಮಾಜ ಕಲ್ಯಾಣ ಇಲಾಖೆ, **ಡಿವಿಜನಲ್ ಜನರಲ್ ಮ್ಯಾನೇಜರ್/ ರೈಲ್ವೆ ಪ್ರಾಧಿಕಾರದ ಅಧಿಕಾರಿಗಳು**, ಡಿವಿಜನಲ್ ಸೆಂಟ್ರಲ್ ಆಫೀಸ್, ಬೆಂಗಳೂರು)

**10. <u>ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಮಾಸಿಕ ಪಿಂಚಣಿ ಸೌಲಭ್ಯ, ವಿಶೇಷ ಆರೋಗ್ಯ ಸೌಲಭ್ಯ ಮತ್ತು ಅನುಕಂಪದ ನೇಮಕಾತಿ ಸೌಲಭ್ಯ ಕಲ್ಪಿಸುವ ಬಗ್ಗೆ</u>**

**<u>ಚರ್ಚೆ</u>**:-ಎಸ್.ಸಿ/ಎಸ್.ಟಿ ಕಾರ್ಮಿಕರು ಮೃತರಾದಲ್ಲಿ ಮೃತರ ಅವಲಂಬಿತರ ಕುಟುಂಬಕ್ಕೆ ಎಸ್.ಸಿ/ಎಸ್.ಟಿ ದೌರ್ಜನ್ಯ ಕಾಯ್ದೆಯಡಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಮಾದರಿಯಲ್ಲಿಯೇ, ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟ ಕುಟುಂಬದ ಅವಲಂಬಿತ ಒಬ್ಬ ಸದಸ್ಯನಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವಂತೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಪ್ರಸ್ತಾಪಿಸಿದರು.

ಸಭೆಯಲ್ಲಿ ಹಾಜರಿದ್ದ ಪೌರಾಡಳಿತ ನಿರ್ದೇಶಕರು ಸರ್ಕಾರಿ ನೌಕರ ಮೃತರಾದಲ್ಲಿ ಮಾತ್ರ ಅವರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸಲು ಅವಕಾಶವಿರುತ್ತದೆ. ಇವರಿಗೂ ಸಹ ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸಲು ಸರ್ಕಾರದಿಂದ ವಿಶೇಷ ಆದೇಶ ಹೊರಡಿಸಬೇಕಾಗಿರುತ್ತದೆ ಎಂದು ತಿಳಿಸಿದರು.

**<u>ಮಾನ್ಯ ಸಭಾಧ್ಯಕ್ಷರ ತೀರ್ಮಾನ</u>**:- ಸರ್ಕಾರಿ ನೌಕರರು ಮೃತರಾದಲ್ಲಿ ಅವರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸುವ ಮಾದರಿಯಲ್ಲಿಯೇ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸಲು ಸರ್ಕಾರದಿಂದ ವಿಶೇಷ ಆದೇಶ ಹೊರಡಿಸಲು ಪೌರಾಡಳಿತ ನಿರ್ದೇಶನಾಲಯವು ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿ 15 ದಿನಗಳೊಳಗೆ ಸರ್ಕಾರಕ್ಕೆ ಕಳುಹಿಸಿ ಕೊಡಲು ತೀರ್ಮಾನಿಸಲಾಯಿತು.



Scanned with CamScanner

(**ಕ್ರಮ**:- **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ನಗರಾಭಿವೃದ್ಧಿ ಇಲಾಖೆ, **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, **ನಿರ್ದೇಶಕರು**, ಪೌರಾಡಳಿತ ನಿರ್ದೇಶನಾಲಯ, **ಆಯುಕ್ತರು**, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)

11. **ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ನಿರ್ಮಿಸಲಾಗಿರುವ Fecal Sludge Management ಸಂಸ್ಕರಣಾ ಘಟಕದಂತೆ ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಘಟಕಗಳನ್ನು ಸ್ಥಾಪಿಸುವ ಬಗ್ಗೆ.**

**ಚರ್ಚೆ**:-ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ನಿರ್ಮಿಸಲಾಗಿರುವ Fecal Sludge Management ಸಂಸ್ಕರಣಾ ಘಟಕದಂತೆ ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಘಟಕಗಳನ್ನು ಸ್ಥಾಪಿಸುವಂತೆ ಎಲ್ಲಾ ಜಿಲ್ಲೆಗಳ ಮುಖ್ಯಸ್ಥರುಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಸಭೆಗೆ ಹಾಜರಾಗಿದ್ದ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಯವರು ತಿಳಿಸಿದರು.

50 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾನವ ತ್ಯಾಜ್ಯ ಕಲ್ಮಷಗಳನ್ನು ಸಂಸ್ಕರಿಸುವ ಘಟಕಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಡಿ.ಪಿ.ಆರ್‌ಗಳನ್ನು ಸಿದ್ಧಪಡಿಸಲು ಅರ್ಹ ಏಜೆನ್ಸಿಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಹೆಚ್ಚಿನದಾಗಿ 101 ನಗರಗಳಿಗೆ ಸದರಿ ವ್ಯವಸ್ಥೆಯನ್ನು ಕಲ್ಪಿಸಲು ಅನುದಾನ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ ಎಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಸಭೆಗೆ ತಿಳಿಸಿದರು.

2020-21ನೇ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳನ್ನೊಳಗೊಂಡಂತೆ ಒಟ್ಟಾರೆ 100 ವೈಜ್ಞಾನಿಕ ಮಲ ತ್ಯಾಜ್ಯ ನಿರ್ವಹಣ ಘಟಕಗಳನ್ನು ಸ್ಥಾಪಿಸಲು ಗುರಿ ಹೊಂದಲಾಗಿದ್ದು, ಈಗಾಗಲೇ ಕೇಂದ್ರ ಸರ್ಕಾರಕ್ಕೆ ವಾರ್ಷಿಕ ಕ್ರಿಯಾ ಯೋಜನೆ ಸಲ್ಲಿಸಿ ಅನುಮೋದನೆ ಪಡೆಯಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಯವರು ತಿಳಿಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ**:- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ನಿರ್ಮಿಸಲಾಗಿರುವ Fecal Sludge Management ಸಂಸ್ಕರಣಾ ಘಟಕದ ಮಾದರಿಯಲ್ಲಿಯೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಗ್ರಾಮೀಣ ಭಾಗಗಳಲ್ಲಿ ಸ್ಥಾಪಿಸಲು ಕ್ರಮವಹಿಸಲು ತೀರ್ಮಾನಿಸಲಾಯಿತು.

(**ಕ್ರಮ**:- **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ನಗರಾಭಿವೃದ್ಧಿ ಇಲಾಖೆ, **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, **ನಿರ್ದೇಶಕರು**, ಪೌರಾಡಳಿತ ನಿರ್ದೇಶನಾಲಯ, **ಆಯುಕ್ತರು**, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)



Scanned with CamScanner

12. **ಮ್ಯಾನ್‌ಹೋಲ್/ ಯುಜಿಡಿ/ ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ಪೌರಕಾರ್ಮಿಕರ ಸೇವೆಯ ಬದಲಾಗಿ ಹೈದರಾಬಾದ್ ವಾಟರ್ ಸಪ್ಲೈಯಲ್ಲಿ ಬಳಸುತ್ತಿರುವ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳು ಮತ್ತು ಕೇರಳದ ರೋಬೋಟ್ ತಂತ್ರಜ್ಞಾನವನ್ನು ಅನುಷ್ಠಾನಗೊಳಿಸುವ ಬಗ್ಗೆ.**

**ಚರ್ಚೆ:-** ಮ್ಯಾನ್‌ಹೋಲ್/ ಯುಜಿಡಿ/ ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ಪೌರಕಾರ್ಮಿಕರ ಸೇವೆಯನ್ನು ಯಂತ್ರಗಳನ್ನು ಉಪಯೋಗಿಸಲು ಬಳಸಿ ಬೆಂಗಳೂರು ಜಲಮಂಡಳಿಯಲ್ಲಿ ಸಕ್ಕಿಂಗ್, ಜಟ್ಟಿಂಗ್, ಡಿಸಿಲ್ಟಿಂಗ್ ಮತ್ತು ಸೂಪರ್ ಸಕ್ಕಿಂಗ್ ಯಂತ್ರಗಳನ್ನು ಬಳಸಿ ಕಾರ್ಯನಿರ್ವಹಿಸಲಾಗುತ್ತಿದೆ.

ಕೇರಳದ ರೋಬೋಟ್ ತಂತ್ರಜ್ಞಾನವನ್ನು ಪ್ರಯೋಗಿಕವಾಗಿ ಅಧ್ಯಯನ ಮಾಡಲಾಗಿದ್ದು. ಈ ರೋಬೋಟ್ ತಂತ್ರಜ್ಞಾನವು ಡಿಸಿಲ್ಟಿಂಗ್ ಮಾಡಲು ಮಾತ್ರ ಉಪಯೋಗವಾಗಿರುತ್ತದೆ. ಮತ್ತು ಯಂತ್ರದ ಡಿಸಿಲ್ಟಿಂಗ್ ಬಕೆಟ್ ಸೂಕ್ಷ್ಮವಾಗಿದ್ದು ಸಧೃಡವಾಗಿರುವುದಿಲ್ಲ. ಹೆಚ್ಚು ಭಾರದ ತ್ಯಾಜ್ಯವನ್ನು ಮತ್ತು ಘನತ್ಯಾಜ್ಯವನ್ನು ಮೇಲೆತ್ತಲು ಸಹಕಾರಿಯಾಗಿರುವುದಿಲ್ಲ. ಇದಕ್ಕೆ ಸಮಾನಾಂತರವಾಗಿ ಬೆಂಗಳೂರು ಜಲಮಂಡಳಿಯಲ್ಲಿ ಈಗಾಗಲೇ ಡಿಸಿಲ್ಟಿಂಗ್ ಯಂತ್ರಗಳನ್ನು ಬಳಸಿ ಇಳಿಗುಂಡಿಗಳ ಡಿಸಿಲ್ಟಿಂಗ್ ಮಾಡಲಾಗುತ್ತಿದೆ ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ಸಭೆಗೆ ತಿಳಿಸಿದರು.

ಕೇರಳದ ರೋಬೋಟ್ ತಂತ್ರಜ್ಞಾನವನ್ನು ಪೈಲಟ್ ಮಾದರಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖರೀದಿಸಲು 4ಜಿ ವಿನಾಯಿತಿ ಪಡೆಯಲು ಸರ್ಕಾರದ ಮಟ್ಟದಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಸಭೆಗೆ ತಿಳಿಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ:-**

1. ರಾಜ್ಯದಲ್ಲಿ ಈಗಾಗಲೇ ಗುರುತಿಸಲಾಗಿರುವ 3,210 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಒಳಗೊಂಡಂತೆ ಸೊಸೈಟಿಯನ್ನು ರಚಿಸುವುದು.
2. ತರಬೇತಿ ಹೊಂದಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸಬ್ಸಿಡಿ ಮತ್ತು ಬ್ಯಾಂಕ್ ಸಾಲದ ಮೂಲಕ ಹೈದರಾಬಾದ್ ವಾಟರ್‌ಸಪ್ಲೈ ಕಾರ್ಯವಿಧಾನದಂತೆ ಸೊಸೈಟಿಯ ಮೂಲಕ ಸಕ್ಕಿಂಗ್/ಜಟ್ಟಿಂಗ್ ಯಂತ್ರಗಳನ್ನು ನೀಡುವ ಯೋಜನೆಗಳನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ರೂಪಿಸಿ ಸ್ವಯಂ ಉದ್ಯೋಗ ಕಲ್ಪಿಸಿ ಉದ್ಯಮಶೀಲರನ್ನಾಗಿ ಮಾಡಲು ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.

(**ಕ್ರಮ:- ವ್ಯವಸ್ಥಾಪಕ ನಿರ್ದೇಶಕರು,** ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, **ಅಧ್ಯಕ್ಷರು,** ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, **ಆಯುಕ್ತರು,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)



Scanned with CamScanner

**13. ಬಿ.ಬಿ.ಎಂ.ಪಿ ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ನೇರಪಾವತಿ ಅಥವಾ ನೇರ ನೇಮಕಾತಿಗೊಳಿಸುವ ಬಗ್ಗೆ.**

**ಚರ್ಚೆ:-**

- ಮೈಸೂರು, ತುಮಕೂರು ಇತರೆ ಜಿಲ್ಲೆಗಳಲ್ಲಿ ನೇರ ನೇಮಕಾತಿ ಪ್ರಕ್ರಿಯೆ ಮುಗಿದಿದ್ದು, ರೋಸ್ಟರ್ ಪದ್ಧತಿಯಿಂದಾಗಿ ಪೌರಕಾರ್ಮಿಕರ ಹುದ್ದೆಗಳು ಬಾಕಿ ಉಳಿದಿರುತ್ತವೆ.
- ಬಳ್ಳಾರಿ, ಶಿವಮೊಗ್ಗ, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಕುರಿತು ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುತ್ತದೆ.
- ಮಂಗಳೂರು ಮಹಾನಗರ ಪಾಲಿಕೆಯಲ್ಲಿ 7 ವರ್ಷದವರೆಗೂ ಗುತ್ತಿಗೆ ಪದ್ಧತಿ ನೀಡಿದ್ದು, ಇದರಿಂದಾಗಿ 7,000 ಜನರಿಗೆ ಅನ್ಯಾಯವಾಗಿರುತ್ತದೆ ಎಂದು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಸದಸ್ಯರು ಸಭೆಗೆ ತಿಳಿಸಿದರು.

ನೋಡಲ್ ಅಧಿಕಾರಿ, ಎಸ್.ಸಿ.ಎಸ್.ಪಿ ಮತ್ತು ಟಿಎಸ್‌ಪಿರವರು 7 ವರ್ಷಗಳು ಗುತ್ತಿಗೆ ನೀಡಿರುವುದು ಕಾನೂನುಬಾಹಿರ ಆಗಿರುವುದರಿಂದ Violation of Contractರನ್ವಯ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ತಿಳಿಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ:-** ರೋಸ್ಟರ್ ಪದ್ಧತಿಯಲ್ಲಿ ಬಾಕಿ ಉಳಿದಿರುವ ಪೌರಕಾರ್ಮಿಕರ ಹುದ್ದೆಯನ್ನು ಬ್ಯಾಕ್‌ಲಾಗ್ ಹುದ್ದೆಯಲ್ಲಿ ಸೇರಿಸುವುದು. ಯಾವ ಜಿಲ್ಲೆಗಳಲ್ಲಿ ಸರ್ಕಾರಿ ಆದೇಶದನ್ವಯ/ ಅಧಿಸೂಚನನೇರ ನೇಮಕಾತಿ ಹಾಗೂ ನೇರ ಪಾವತಿ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ, ಅಂತಹ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೇಲೆ ಎ.ಎಸ್. ಕಾಯ್ದೆ 2013 ರಡಿ ಪ್ರಕರಣವನ್ನು ದಾಖಲು ಮಾಡಲು ತೀರ್ಮಾನಿಸಲಾಯಿತು.

(**ಕ್ರಮ:- ನಿರ್ದೇಶಕರು,** ಪೌರಾಡಳಿತ ನಿರ್ದೇಶನಾಲಯ, **ಆಯುಕ್ತರು,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕಂದಾಯ ಇಲಾಖೆ)

**14. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಕೋವಿಡ್-19 ಹಿನ್ನೆಲೆಯಲ್ಲಿ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಬಗ್ಗೆ ಹಾಗೂ ಕೋವಿಡ್‌ನಿಂದ ಮೃತಪಟ್ಟಲ್ಲಿ ಸರ್ಕಾರದ ಆದೇಶದನ್ವಯ ಪರಿಹಾರವನ್ನು ನೀಡಿರುವ ಬಗ್ಗೆ.**

**ಚರ್ಚೆ:-**ಕೋವಿಡ್-19 ಸಮಯದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಛತಾ ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಸುರಕ್ಷತಾ ಸಲಕರಣೆಗಳಾದ ಗಮ್‌ಬೂಟ್ಸ್, ಗಾಗಲ್ಸ್, ಮಾಸ್ಕ್, ಸ್ಯಾನಿಟೈಸರ್, ಸೋಪ್ ಇತ್ಯಾದಿಗಳನ್ನು ಖರೀದಿಸಲು ರೂ.405.00 ಲಕ್ಷಗಳ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಸ್ವಚ್ಛತಾ ಸಿಬ್ಬಂದಿಗಳು ಕೋವಿಡ್‌ನಿಂದ



Scanned with CamScanner

ಮೃತಪಟ್ಟಲ್ಲಿ ಸರ್ಕಾರದ ಆದೇಶದನ್ವಯ ಪರಿಹಾರ ನೀಡಲು ಕ್ರಮವಹಿಸಲಾಗುವುದು ಎಂದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಯವರು ತಿಳಿಸಿದರು.

ಬೆಂಗಳೂರು ಜಲಮಂಡಳಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರು/ ಪೌರಕಾರ್ಮಿಕರಿಗೆ ಸರ್ಕಾರದ ಮಾರ್ಗಸೂಚಿಯಂತೆ ಎಲ್ಲಾ ಸುರಕ್ಷತಾ ಪರಿಕರಗಳನ್ನು ನೀಡಲಾಗಿದೆ. ಹಾಗೂ ಬೆಂಗಳೂರು ಜಲಮಂಡಳಿ ವ್ಯಾಪ್ತಿಯಲ್ಲಿ ಕೋವಿಡ್-19 ನಿಂದ ಯಾವುದೇ ಸ್ವಚ್ಛತಾ ಕಾರ್ಮಿಕರು/ ಪೌರಕಾರ್ಮಿಕರು ಮೃತಪಟ್ಟಿರುವುದಿಲ್ಲ. ಕೋವಿಡ್-19 ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಮಿಕರು/ ಪೌರಕಾರ್ಮಿಕರು ಕೋವಿಡ್‌ನಿಂದ ಮೃತಪಟ್ಟಲ್ಲಿ ಸರ್ಕಾರದ ಆದೇಶದಂತೆ ಪರಿಹಾರಧನ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ಸಭೆಗೆ ತಿಳಿಸಿದರು.

ಎಲ್ಲಾ ಕೆಲಸಗಾರರಿಗೆ ಪ್ರತಿನಿತ್ಯ ಬೆಳಗಿನ ಉಪಹಾರ ನೀಡಲಾಗುತ್ತಿದೆ. ಜಿಲ್ಲಾ ಆರೋಗ್ಯ ಇಲಾಖೆಯೊಂದಿಗೆ ಸಮನ್ವಯತೆ ಸಾಧಿಸಿ Thermal sensors ಮೂಲಕ ಎಲ್ಲಾ ಸಿಬ್ಬಂದಿಗಳನ್ನು ತಪಾಸಣೆಗೆ ಒಳಪಡಿಸಲು ಕ್ರಮವಹಿಸಿದೆ. ಅವಶ್ಯವಿರುವ ಸ್ವಚ್ಚತಾ ಸಿಬ್ಬಂದಿಗಳಿಗೆ ಸೂಕ್ತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.ಎಲ್ಲಾ ಕೆಲಸಗಾರರಿಗೆ ಗ್ಲೋವಿಸ್, ಗಮ್ ಬೂಟ್ಸ್, ಏಪ್ರಾನ್, ಇತರೆ ಸುರಕ್ಷಾ ಧಿರಿಸುಗಳನ್ನು ನೀಡಲಾಗಿದೆ. ವಾರಕ್ಕೊಮ್ಮೆ ಪೌರಕಾರ್ಮಿಕರು ಸೇರಿದಂತೆ ಎಲ್ಲಾ ಸ್ವಚ್ಚತಾ ಕೆಲಸಗಾರರಿಗೆ ಆರೋಗ್ಯ ತಪಾಸಣೆಯನ್ನು ಕಡ್ಡಾಯವಾಗಿ ಮಾಡಿಸಲಾಗುತ್ತಿದೆ. ಕೋವಿಡ್‌ನಿಂದಾಗಿ ಮರಣ ಹೊಂದಿದಲ್ಲಿ ರೂ.30 ಲಕ್ಷಗಳ ವಿಮೆ ಸೌಲಭ್ಯ ಕಲ್ಪಿಸಲಾಗಿದೆ. ಎಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಸಭೆಗೆ ತಿಳಿಸಿದರು.

ಕೋವಿಡ್-19 ಸಮಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೂ ಸರ್ಕಾರಿ ಆದೇಶದ ನಿರ್ದೇಶನದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಒದಗಿಸಿದ ಸೌಲಭ್ಯಗಳ ಬಗ್ಗೆ ಮಾನ್ಯ ಉಚ್ಛನ್ಯಾಯಾಲಯವು ಪ್ರತಿ 15 ದಿನಗಳಿಗೊಮ್ಮೆ ಮೇಲ್ವಿಚಾರಣೆ ನಡೆಸುತ್ತಿದೆ ಎಂದು ಸಭೆಯಲ್ಲಿ ಹಾಜರಿದ್ದ ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ರಾಜ್ಯ ಮೇಲ್ವಿಚಾರಣಾ ಸಮಿತಿ ಸದಸ್ಯರಾದ ಶ್ರೀಮತಿ.ಗೀತಾ ರಾಜು ವಾಡೇಕರ್ ರವರು ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಮಹಿಳಾ ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳನ್ನು ಧರಿಸದೇ ಕಾರ್ಯನಿರ್ವಹಿಸುತ್ತಿರುತ್ತಾರೆ. ಮಸ್ಟ್ರಿಂಗ್ ಪಾಯಿಂಟ್, ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಿರುವುದಿಲ್ಲ ಮತ್ತು ಬೆಳಗಿನ ಉಪಾಹಾರವನ್ನು ಬೀದಿ ಬದಿಯಲ್ಲೇ ಸೇವಿಸುತ್ತಿರುತ್ತಾರೆ ಹಾಗೂ ಪಿ.ಎಫ್ ಮತ್ತು ಇ.ಎಸ್.ಐಗಳನ್ನು ಸರಿಯಾದ ರೀತಿಯಲ್ಲಿ ನೀಡುತ್ತಿಲ್ಲವೆಂದು ಸಭೆಗೆ ವಿವರಿಸಿದರು.

**ಮಾನ್ಯ ಸಭಾಧ್ಯಕ್ಷರ ತೀರ್ಮಾನ:-**

1. ಕೋವಿಡ್-19 ಸಂದರ್ಭದಲ್ಲಿ ಸರ್ಕಾರಿ /ಖಾಸಗಿ /ದಿನಗೂಲಿ/ ನೇರ ಪಾವತಿಯಡಿ/ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವಂತಹ ಸ್ವಚ್ಛತಾ ಕೆಲಸಗಾರ/



Scanned with CamScanner

ಸಫಾಯಿ ಕರ್ಮಚಾರಿಗಳಿಗೆ ಸೋಂಕಿತರಾಗಿದ್ದಲ್ಲಿ, ಅವರಿಗೆ ವೇತನ ಸಹಿತ ರಜೆ ಮಂಜೂರು ಮಾಡುವುದು. ಕೆಲಸದಿಂದ ಯಾವುದೇ ಕಾರಣಕ್ಕೂ ತೆಗೆಯಬಾರದು.

2. ಸೋಂಕಿನಿಂದ ಮೃತಪಟ್ಟವರಿಗೆ ರೂ.30 ಲಕ್ಷಗಳ ಪರಿಹಾರಧನ ವಿತರಿಸುವುದು. ಮೃತಪಟ್ಟ ಕುಟುಂಬದ ಅವಲಂಬಿತರಿಗೆ, ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಕಲ್ಪಿಸಲು ಸುತ್ತೋಲೆಯನ್ನು ಹೊರಡಿಸುವುದು.
3. ಪೌರಕಾರ್ಮಿಕರಿಗೆ/ನಿರ್ಮಲೀಕರಣ ಸ್ವಚ್ಛತಾ ಕೆಲಸಗಾರರಿಗೆ ಕಡ್ಡಾಯವಾಗಿ ಸುರಕ್ಷತಾ ಪರಿಕರಗಳನ್ನು ಧರಿಸಿ, ಕಾರ್ಯನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸುವುದು. ಸುರಕ್ಷತಾ ಪರಿಕರಗಳಿಲ್ಲದೆ ಕೆಲಸ ನಿರ್ವಹಿಸಲು ಕಾರಣರಾದ ಅಧಿಕಾರಿಗಳ ಮೇಲೆ ಕಾಯ್ದೆ ಪ್ರಕಾರ ಕ್ರಮವಹಿಸುವುದು.
4. ಪೌರಕಾರ್ಮಿಕರಿಗೆ/ನಿರ್ಮಲೀಕರಣ ಸ್ವಚ್ಛತಾ ಕೆಲಸಗಾರರಿಗೆ ಕಡ್ಡಾಯವಾಗಿ ಕುಡಿಯುವ ನೀರು, ಸಮವಸ್ತ್ರ ಬದಲಾವಣೆ ಸ್ಥಳ, ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸುವುದು.
5. ಕೋವಿಡ್-19 ಹಿನ್ನೆಲೆಯಲ್ಲಿ ಪ್ರತಿ ವಾರಕ್ಕೊಮ್ಮೆ ನುರಿತ ವೈದ್ಯರಿಂದ ವೈದ್ಯಕೀಯ ತಪಾಸಣೆಯನ್ನು ಮಾಡಿಸುವುದು.

(<u>ಕ್ರಮ</u>:- **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ನಗರಾಭಿವೃದ್ಧಿ ಇಲಾಖೆ, **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, **ನಿರ್ದೇಶಕರು**, ಪೌರಾಡಳಿತ ನಿರ್ದೇಶನಾಲಯ, **ಅಧ್ಯಕ್ಷರು**, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, **ಆಯುಕ್ತರು**, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)

## 15. <u>ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು.</u>

1973ರ ಪೂರ್ವದಲ್ಲಿ ವಾಸವಾಗಿರುವ ಸ್ಕ್ಯಾವೆಂಜರ್ ಕುಟುಂಬದ ಅವಲಂಬಿತರಿಗೆ ಹಕ್ಕುಪತ್ರಗಳನ್ನು ವಿತರಿಸುವ ಬಗ್ಗೆ

**<u>ಚರ್ಚೆ</u>:-**ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿ ತೊಡಗಿದ್ದ ಕುಟುಂಬದ ಅವಲಂಬಿತರಿಗೆ 1973ರ ಪೂರ್ವದಲ್ಲಿ ಭಂಗಿ ಕಾಲೋನಿಯಲ್ಲಿ ವಂಶಪಾರಂಪರ್ಯವಾಗಿ ವಾಸಿಸಲು 3,000 ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಆದರೆ ಮನೆಗಳನ್ನು ಅವರ ಹೆಸರಿಗೆ ನೋಂದಾಯಿಸಲು ಹಕ್ಕುಪತ್ರಗಳನ್ನು ನೀಡಿರುವುದಿಲ್ಲ ಎಂದು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಸದಸ್ಯರು ಸಭೆಗೆ ತಿಳಿಸಿರುತ್ತಾರೆ.

**<u>ಮಾನ್ಯ ಸಭಾಧ್ಯಕ್ಷರ ತೀರ್ಮಾನ:-</u>**

1. ಹಂಚಿಕೆ ಮಾಡಲಾಗಿರುವ ಮನೆಗಳು ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿದ್ದಲ್ಲಿ ಹಕ್ಕುಪತ್ರಗಳನ್ನು ವಿತರಿಸಲುಪೌರಾಡಳಿತ ಇಲಾಖೆ ಕ್ರಮವಹಿಸುವುದು.



Scanned with CamScanner

2. ಖಾಸಗಿ ಜಮೀನಿನಲ್ಲಿ ವಾಸವಾಗಿರುವ ಮನೆಗಳನ್ನು ಪಟ್ಟಿ ಮಾಡಿ ಸದರಿ ಜಾಗವನ್ನುಸರ್ಕಾರದ ಸ್ವಾಧೀನಕ್ಕೆ ಪಡೆಯುವುದು ಅಥವಾ ಖರೀದಿ ಮಾಡಲು ಪೌರಾಡಳಿತ ಇಲಾಖೆ ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.

**(ಕ್ರಮ:-ನಿರ್ದೇಶಕರು,**ಪೌರಾಡಳಿತ ನಿರ್ದೇಶನಾಲಯ)

ಸಭೆಯಲ್ಲಿ ಹಾಜರಿದ್ದು, ಅಭಿಪ್ರಾಯ/ ಸಲಹೆ ಹಾಗೂ ಸೂಚನೆಗಳನ್ನು ನೀಡಿದ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳಿಗೆ ಕಾರ್ಯದರ್ಶಿಗಳು, ಸಫಾಯಿ ಕರ್ಮಚಾರಿಗಳ ಆಯೋಗ ರವರು ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ಶ್ರೀ. ಗೋವಿಂದ ಎಂ. ಕಾರಜೋಳ**
ಸನ್ಮಾನ್ಯ ಅಧ್ಯಕ್ಷರು, ರಾಜ್ಯ
ಮೇಲ್ವಿಚಾರಣಾ ಸಮಿತಿ ಮತ್ತು
ಮಾನ್ಯ ಉಪ ಮುಖ್ಯಮಂತ್ರಿಗಳು
ಹಾಗೂ ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ ಸಚಿವರು

****



Scanned with CamScanner